


ವಿಶ್ವಕಪ್ ವಿಜೇತ ಬಾಂಗ್ಲಾದೇಶ ತಂಡ

# ಹೇಗಿತ್ತು ಹೇಗಾಯ್ತು ಗೊತ್ತಾ? ಬಾಂಗ್ಲಾ ಕ್ರಿಕೆಟ್‌ನಲ್ಲಿ ನವೋದಯ

■ ಪ್ರಮೋದ್

ಈ ಬಾರಿಯ 19 ವರ್ಷದ ಒಳಗಿನವರ ಐಸಿಸಿ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯಕ್ಕೂ ಒಂದು ದಿನ ಮೊದಲು 'ಈ ಬಾರಿ ಯಾರಿಗೆ ಪ್ರಶಸ್ತಿ' ಎನ್ನುವ ಪ್ರಶ್ನೆ ಸಾಮಾಜಿಕ ತಾಣಗಳಲ್ಲಿ ಪದೇ ಪದೇ ಸದ್ದು ಮಾಡುತ್ತಿತ್ತು. ಬಹುತೇಕರ ಉತ್ತರ 'ಭಾರತ' ಎನ್ನುವುದಾಗಿತ್ತು.

19 ವರ್ಷದೊಳಗಿನ ವಯೋಮಾನದವರ ವಿಶ್ವಕಪ್‌ನಲ್ಲಿ ಹೆಚ್ಚು ಬಾರಿ ಟ್ರೋಫಿ ಗೆದ್ದ ಹೆಗ್ಗಳಿಕೆ ಹೊಂದಿರುವ ಭಾರತ ಎಲ್ಲ ಕ್ರಿಕೆಟ್ ಪ್ರೇಮಿಗಳ ನೆಚ್ಚಿನ ತಂಡವಾಗಿತ್ತು. ಅಲ್ಲದೆ, ಬಾಂಗ್ಲಾದೇಶದ ಯುವ ಆಟಗಾರರು ಹಿಂದಿನ ಟೂರ್ನಿಗಳಲ್ಲಿ ಗಮನಾರ್ಹ ಪ್ರದರ್ಶನ ನೀಡಿರಲಿಲ್ಲ. 1998ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಟೂರ್ನಿಯಲ್ಲಿ ಆಡುವ ಮೂಲಕ ಬಾಂಗ್ಲಾ ತಂಡದವರು ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ್ದರು.

ಇದಾದ ಬಳಿಕ ಹತ್ತು ಸಲ ಐಸಿಸಿಯ ಪ್ರತಿಷ್ಠಿತ ಟೂರ್ನಿಯಲ್ಲಿ ಆಡಿದ್ದರೂ ಒಮ್ಮೆಯೂ ಪ್ರಶಸ್ತಿ ಸಿಕ್ಕಿರಲಿಲ್ಲ. 19 ವರ್ಷದ ಒಳಗಿನವರ ಬಾಂಗ್ಲಾ ತಂಡ 1997ರ ಬಳಿಕ ಅಧಿಕೃತವಾಗಿ ಏಕದಿನ ಪಂದ್ಯಗಳನ್ನು ಆಡಲು ಆರಂಭಿಸಿತು. 2004ರಿಂದ ಎಂಟು ಯುವ ಟೆಸ್ಟ್ ಟೂರ್ನಿಗಳಲ್ಲಿ ಪಾಲ್ಗೊಂಡಿದ್ದರೂ, ಒಮ್ಮೆಯೂ ಟ್ರೋಫಿ ಗೆದ್ದಿರಲಿಲ್ಲ. ದಕ್ಷಿಣ ಆಫ್ರಿಕಾ ತಂಡದ ಎದುರು 2008ರ ವಿಶ್ವಕಪ್ ಟೂರ್ನಿಯಲ್ಲಿ ಬಾಂಗ್ಲಾ ಕೇವಲ 12 ಓವರ್‌ಗಳಲ್ಲಿ 41 ರನ್‌ಗೆ ಆಲೌಟ್ ಆಗಿ ಸಾಕಷ್ಟು ಟೀಕೆಗೆ ಒಳಗಾಗಿತ್ತು. ಇದು ಯುವ ವಿಶ್ವಕಪ್‌ನಲ್ಲಿ ಬಾಂಗ್ಲಾ ತಂಡದ ಅತ್ಯಂತ ಕಡಿಮೆ ಮೊತ್ತವಾಗಿ ಈಗಲೂ ಉಳಿದಿದೆ. ಬಾಂಗ್ಲಾ ಇಷ್ಟೆಲ್ಲ ಸೋಲಿನ ಇತಿಹಾಸ ಹೊಂದಿದ್ದ ಕಾರಣ ಕ್ರಿಕೆಟ್ ಪ್ರೇಮಿಗಳು 'ಭಾರತವೇ ಚಾಂಪಿಯನ್' ಎಂದು ಸಾಮಾಜಿಕ ತಾಣಗಳಲ್ಲಿ ಷರಾ ಬರೆದುಬಿಟ್ಟಿದ್ದರು.

ಆದರೆ, ಬಾಂಗ್ಲಾ 'ಹುಲಿ'ಗಳು ಎಲ್ಲರ ನಿರೀಕ್ಷೆಯನ್ನೂ ಹುಸಿಮಾಡಿ ಟ್ರೋಫಿ ಎತ್ತಿ ಹಿಡಿದು ಕ್ರಿಕೆಟ್ ಲೋಕ ತಮ್ಮತ್ತ ಅಚ್ಚರಿಯಿಂದ ನೋಡುವಂತೆ ಮಾಡಿದ್ದಾರೆ. ಜೊತೆಗೆ 2018ರ ವಿಶ್ವಕಪ್‌ನಿಂದ ಸತತವಾಗಿ ಪಂದ್ಯಗಳನ್ನು ಗೆದ್ದ ದಾಖಲೆ ಹೊಂದಿದ್ದ ಭಾರತದ ಅಜೇಯ ಓಟದ ಸಾಧನೆಗೂ ಅಂತ್ಯ ಹಾಡಿದ್ದಾರೆ. ಬಾಂಗ್ಲಾ ತಂಡದವರು ಯಾವ ದೇಶದಲ್ಲಿ ವಿಶ್ವಕಪ್ ಟೂರ್ನಿಗೆ ಪದಾರ್ಪಣೆ ಮಾಡಿದ್ದರೋ; ಅದೇ ದೇಶದಲ್ಲಿ ಟ್ರೋಫಿ ಎತ್ತಿ ಹಿಡಿದಿದ್ದಾರೆ.

ಬಾಂಗ್ಲಾದೇಶ ತಂಡದ ಈ ಅಮೋಘ



ಬಾಂಗ್ಲಾದೇಶದ ಶಾಹೀನ್ ಆಲಮ್ ಸಂಭ್ರಮಾಚರಣೆ